ಎಂ ವಿ ಸಿ ನಂ॰ 234/2023
ಆರ್. ಡಬ್ಲ್ಯೂ-1

**(ಇಂದು ದಿನಾಂಕ 02-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಎದುರುದಾರರ ಪರ ಶ್ರೀ ಎಮ್ ವಾಯ್ ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ.ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಅಧಿಕಾರ ಪತ್ರ | ನಿಡಿ-1 |
| 2 | ವಿಮಾ ಪತ್ರದ ದೃಡಿಕೃತ ಪ್ರತಿ | ನಿಡಿ-2 |

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ. ಎಸ್.ಎಸ್. ಕೆ ವಕೀಲರಿಂದ**

ಅಪಘಾತದ ಸಮಯದಲ್ಲಿ ಕೆಎ 26/ಇಎಫ್-6742 ರಲ್ಲಿ ನಾನು ಹೇಳಿದಂತೆ ಮೂರು ಜನ ಪ್ರಯಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ ಅಪಘಾತದ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಮಾತ್ರ ಸವಾರಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪೋಲಿಸರೇ ತಪ್ಪು ಮಾಹಿತಿಯನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ ಇಬ್ಬರು ವ್ಯಕ್ತಿಗಳು ಪ್ರಯಾಣ ಮಾಡುತ್ತಿದ್ದ ಕಾರಣ ನಮ್ಮ ಕಂಪನಿಯೇ ಪರಿಹಾರ ಪಾವತಿಸಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾಹಾಗೂ ಸಿಜೆಎಂ, ಧಾರವಾಡ.